# ಮೈಸೂರು ವಿಶ್ವವಿದ್ಯಾನಿಲಯ

ವಿಶ್ವವಿದ್ಯಾನಿಲಯ ಕಾರ್ಯಸೌಧ
ಕ್ರಾಫರ್ಡ್ ಭವನ, ಮೈಸೂರು

ಸಂಖ್ಯೆ: ಯುಎ-3/606/2018-19

ದಿನಾಂಕ 31-01-2019

ಶಿಕ್ಷಣ ಮಂಡಳಿ ಸದಸ್ಯರುಗಳಿಗೆ,

ಮಾನ್ಯರೆ,

ವಿಷಯ: ದಿನಾಂಕ: 14-01-2019ರಂದು ನಡೆದ ಶಿಕ್ಷಣ ಮಂಡಳಿ ಎರಡನೇ ಸಾಮಾನ್ಯ ಸಭೆಯ ನಡಾವಳಿಯನ್ನು ಕಳುಹಿಸುವ ಬಗ್ಗೆ.

* * * * *

ದಿನಾಂಕ 14-01-2019ರಂದು ಬೆಳಗ್ಗೆ 11-00 ಗಂಟೆಗೆ, ಕ್ರಾಫರ್ಡ್ ಭವನದ ಶಿಕ್ಷಣ ಮಂಡಳಿ ಸಭಾಂಗಣದಲ್ಲಿ ನಡೆದ, ಶಿಕ್ಷಣ ಮಂಡಳಿಯ ಎರಡನೇ ಸಾಮಾನ್ಯ ಸಭೆಯ ನಡಾವಳಿಗಳ ಪ್ರತಿಯನ್ನು ತಮ್ಮ ಮಾಹಿತಿಗಾಗಿ ಈ ಮೂಲಕ ಕಳುಹಿಸಿಕೊಡಲಾಗಿದೆ, ನಡಾವಳಿಯಲ್ಲಿ ಹೇಳಿರುವ ಯಾವುದೇ ಅಂಶದ ಯಥಾರ್ಥತೆಯ ಬಗ್ಗೆ ಸಭೆಯಲ್ಲಿ ಹಾಜರಿದ್ದ ಸದಸ್ಯರುಗಳಿಂದ ನಡಾವಳಿಗಳನ್ನು ಕಳುಹಿಸಿದ ದಿನಾಂಕದಿಂದ 21 ದಿನಗಳ ಒಳಗಾಗಿ ಆಕ್ಷೇಪಣೆ ಬಾರದಿದ್ದಲ್ಲಿ, ನಡಾವಳಿಯಲ್ಲಿ ಹೇಳಿರುವ ಎಲ್ಲಾ ಅಂಶಗಳು ಸರಿಯಾಗಿವೆ ಎಂದು ಪರಿಗಣಿಸಲ್ಪಡುತ್ತವೆ, ಆದುದರಿಂದ, ನಡಾವಳಿಯ ಬಗ್ಗೆ ನಿಮ್ಮ ಆಕ್ಷೇಪಣೆ(ಗಳು) ಏನಾದರೂ ಇದ್ದಲ್ಲಿ, ಈ ಬಗ್ಗೆ "ಕುಲಸಚಿವರು, ಮೈಸೂರು ವಿಶ್ವವಿದ್ಯಾನಿಲಯ, ಕ್ರಾಫರ್ಡ್‌ಭವನ, ಮೈಸೂರು" ಇವರನ್ನು ಉದ್ದೇಶಿಸಿ ಬರೆದ ಪತ್ರವನ್ನು ದಿನಾಂಕ 20-02-2019ರ ಒಳಗಾಗಿ, ವಿಶೇಷಾಧಿಕಾರಿಗಳು, ಸಿಂಡಿಕೇಟ್ ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ, ಕ್ರಾಫರ್ಡ್‌ಭವನ, ಮೈಸೂರು-570 005 ಇವರಿಗೆ ನೇರವಾಗಿ ತಲುಪಿಸುವಂತೆ ಕೋರಲಾಗಿದೆ.

ತಮ್ಮ ನಂಬುಗೆಯ

31/1/19

ವಿಶೇಷಾಧಿಕಾರಿ(ಪ್ರಾಧಿಕಾರ)

31/01

ಪ್ರತಿ:

1. ಘನತೆವೆತ್ತ ರಾಜ್ಯಪಾಲರ ಕಾರ್ಯದರ್ಶಿಗಳು, ರಾಜಭವನ, ಬೆಂಗಳೂರು – ಘನತೆವೆತ್ತ ರಾಜ್ಯಪಾಲರ ಅವಗಹಾನೆಗೆ ತರಬೇಕಾಗಿ ಕೋರಲಾಗಿದೆ.
2. ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ(ವಿಶ್ವವಿದ್ಯಾನಿಲಯ), ಬಹುಮಹಡಿಗಳ ಕಟ್ಟಡ, ಬೆಂಗಳೂರು.
3. ಕುಲಸಚಿವರು(ಪರೀಕ್ಷಾಂಗ)/ಹಣಕಾಸು ಅಧಿಕಾರಿಗಳು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
4. ನಿರ್ದೇಶಕರು, ಪಿ.ಎಂ.ಇ.ಬಿ/ ಕಾಲೇಜು ಅಭಿವೃದ್ಧಿ ಮಂಡಳಿ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
5. ನಿರ್ದೇಶಕರು, ವಿದ್ಯಾರ್ಥಿಕ್ಷೇಮಪಾಲನ ನಿರ್ದೇಶನಾಲಯ, ಮಾನಸಗಂಗೋತ್ರಿ, ಮೈಸೂರು.
6. ಎಲ್ಲಾ ಉಪಕುಲಸಚಿವರು/ಸಹಾಯಕ ಕುಲಸಚಿವರು(ಶೈಕ್ಷಣಿಕ/ಆಡಳಿತ/ಅಭಿವೃದ್ಧಿ/ಪರಿಶಿಷ್ಟಜಾತಿ ಮತ್ತು ಪರಿಶಿಷ್ಟ ವರ್ಗಗಳ ವಿಶೇಷ ಘಟಕ), ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
7. ಕುಲಪತಿ/ಕುಲಸಚಿವ/ಕುಲಸಚಿವ(ಪರೀಕ್ಷಾಂಗ)/ಹಣಕಾಸು ಅಧಿಕಾರಿಗಳ ಆಪ್ತ ಸಹಾಯಕರು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
8. ಕಛೇರಿ ಪ್ರತಿ.

**AC Forwarding letter**

# ಮೈಸೂರು ವಿಶ್ವವಿದ್ಯಾನಿಲಯ

ಮೈಸೂರು ವಿಶ್ವವಿದ್ಯಾನಿಲಯದ ಕ್ರಾಫರ್ಡ್‌ಭವನದ ಶಿಕ್ಷಣ ಮಂಡಳಿ ಸಭಾಂಗಣದಲ್ಲಿ ದಿನಾಂಕ: 14-01-2019 ರಂದು ಪೂರ್ವಾಹ್ನ 11-00 ಗಂಟೆಗೆ ನಡೆದ ಶಿಕ್ಷಣ ಮಂಡಳಿಯ ಎರಡನೇ ಸಾಮಾನ್ಯ ಸಭೆಯ ನಡಾವಳಿಗಳು.

<u>ಸಭೆಗೆ ಹಾಜರಾದ ಸದಸ್ಯರುಗಳು</u>

| | |
|---|---|
| 1. ಪ್ರೊ. ಜಿ. ಹೇಮಂತ ಕುಮಾರ್ ಕುಲಪತಿಗಳು | ... ಅಧ್ಯಕ್ಷರು |
| 2. ಶ್ರೀ.ಅಪ್ಪಾಜಿಗೌಡ, ವಿಧಾನ ಪರಿಷತ್ ಸದಸ್ಯರು | ... ಸದಸ್ಯರು |
| 3. ಡಾ.ಎಂ.ಸಿ.ನಟರಾಜ | ... ಸದಸ್ಯರು |
| 4. ಶ್ರೀ ಶಾಂತಕುಮಾರ. ಕೆ | ... ಸದಸ್ಯರು |
| 5. ಶ್ರೀ.ಜಿ.ಅಶ್ವತ್ಥ್ ನಾರಾಯಣ | ... ಸದಸ್ಯರು |
| 6. ಶ್ರೀ.ಕುಮಾರ್ | ... ಸದಸ್ಯರು |
| 7. ಡಾ.ಪಿ.ಎಸ್.ಸುರೇಶ್ | ... ಸದಸ್ಯರು |
| 8. ಡಾ.ಎಂ.ಪ್ರೀತಿ | ... ಸದಸ್ಯರು |
| 9. ಡಾ.ರಾಜಗೋಪಾಲ್ | ... ಸದಸ್ಯರು |
| 10. ಶ್ರೀ ಜೆ.ಯು. ಚನ್ನಬಸಪ್ಪ | ... ಸದಸ್ಯರು |
| 11. ಪ್ರೊ. ಎನ್.ಎಂ.ತಳವಾರ್ | ... ಸದಸ್ಯರು |
| 12. ಪ್ರೊ. ಹೆಚ್.ಟಿ.ಬಸವರಾಜಪ್ಪ | ... ಸದಸ್ಯರು |
| 13. ಪ್ರೊ.ಎಸ್.ಎಲ್. ಬೆಳಗಲಿ | ... ಸದಸ್ಯರು |
| 14. ಪ್ರೊ.ಆಯಿಷಾ ಎಂ ಶೆರೀಫ್ | ... ಸದಸ್ಯರು |
| 15. ಪ್ರೊ. ಶಿವಬಸವಯ್ಯ | ... ಸದಸ್ಯರು |
| 16. ಡಾ. ಎಸ್.ಮದಿಅಳಗನ್ | ... ಸದಸ್ಯರು |
| 17. ಶ್ರೀ ರಘು ಸಿ ಎಸ್ | ... ಸದಸ್ಯರು |
| 18. ಡಾ.ಪಿ. ಸರಸ್ವತಿ, ಗ್ರಂಥಪಾಲಕರು | ... ಸದಸ್ಯರು |
| 19. ಡಾ.ಎಸ್. ಶ್ರೀಕಂಠಸ್ವಾಮಿ, ನಿರ್ದೇಶಕರು, ಕಾಲೇಜು ಅಭಿವೃದ್ಧಿ ಮಂಡಳಿ | ... ಸದಸ್ಯರು |
| 20. ಪ್ರೊ. ಯಶವಂತ ಡೋಂಗ್ರೆ, ನಿರ್ದೇಶಕರು, ಪಿ.ಎಂ.ಇ.ಬಿ. | ... ಸದಸ್ಯರು |
| 21. ಪ್ರೊ. ಸಿ. ರಾಮಸ್ವಾಮಿ, ನಿರ್ದೇಶಕರು, ವಿದ್ಯಾರ್ಥಿ ಕ್ಷೇಮಪಾಲನಾ ನಿರ್ದೇಶನಾಲಯ | ... ಸದಸ್ಯರು |
| 22. ಡಾ.ಪಿ.ಕೃಷ್ಣಯ್ಯ, ನಿರ್ದೇಶಕರು, ದೈಹಿಕ ಶಿಕ್ಷಣ ವಿಭಾಗ | ... ಸದಸ್ಯರು |
| 23. ಪ್ರೊ. ಜೆ. ಸೋಮಶೇಖರ್, ಕುಲಸಚಿವ(ಪರೀಕ್ಷಾಂಗ) | ... ಸದಸ್ಯರು |
| 24. ಪ್ರೊ.ಬಿ.ಮಹದೇವಪ್ಪ, ಹಣಕಾಸು ಅಧಿಕಾರಿಗಳು | ... ಸದಸ್ಯರು |
| 25. ಪ್ರೊ. ಆರ್. ರಾಜಣ್ಣ, ಕುಲಸಚಿವರು | ... ಸದಸ್ಯ ಕಾರ್ಯದರ್ಶಿ |

<u>ವಿಶೇಷ ಆಹ್ವಾನಿತರು</u>

26. ಪ್ರೊ. ಸದಾನಂದ ಎಂ ಯಮಕನಮರಡಿ

ಸಭೆಗೆ ಹಾಜರಾಗದವರು

1. ನಿರ್ದೇಶಕರು, ತಾಂತ್ರಿಕ ಶಿಕ್ಷಣ
2. ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ
3. ಶ್ರೀ ಕೆ.ಟಿ. ಶ್ರೀಕಂಠೇಗೌಡ
4. ಶ್ರೀಮತಿ ಎಂ.ಎನ್.ಪೊನ್ನಮ್ಮ
5. ಡಾ. ವಿ. ಶಿವಪ್ರಸಾದ್
6. ಪ್ರೊ.ಬಿ.ಪಿ.ಮಹೇಶ್‌ಚಂದ್ರ ಗುರು
7. ಶ್ರೀ.ನಾಗೇಶ್ ಕರಿಯಪ್ಪ
8. ಶ್ರೀ ಬೆಳವಾಡಿ ಪ್ರಭಾಕರ್
9. ಪ್ರೊ. ಮಹದೇವ
10. ಪ್ರೊ.ಸಿ.ಬಸವರಾಜು

ಮೊದಲಿಗೆ, ಮಾನ್ಯ ಕುಲಸಚಿವರು ಮಾತನಾಡಿ ಇತ್ತೀಚೆಗೆ ದೈವಾಧೀನರಾದ ಮಾನ್ಯ ಕೇಂದ್ರ ಸಚಿವರಾದ ಶ್ರೀ ಅನಂತ್‌ಕುಮಾರ್, ಕೇಂದ್ರ ಮತ್ತು ರಾಜ್ಯ ಸರ್ಕಾರದ ಮಾಜಿ ಸಚಿವರು ಹಾಗೂ ಖ್ಯಾತ ಚಲನಚಿತ್ರ ನಟರಾದ ಡಾ. ಅಂಬರೀಶ್, ಕೇಂದ್ರದ ಮಾಜಿ ರೈಲ್ವೆ ಸಚಿವರಾದ ಶ್ರೀ ಸಿ.ಕೆ. ಜಾಫರ್ ಷರೀಫ್ ಅವರುಗಳ ನಿಧನಕ್ಕೆ ಸಂತಾಪ ಸೂಚಿಸಿ ಎರಡು ನಿಮಿಷ ಮೌನವನ್ನು ಆಚರಿಸಲಾಯಿತ್ತು.

ನಂತರ ಶಿಕ್ಷಣ ಮಂಡಳಿಯ ಎಲ್ಲಾ ಸದಸ್ಯರುಗಳನ್ನು ಹಾಗೂ ಪತ್ರಿಕಾ ಮಾಧ್ಯಮದವರನ್ನು ಹಾಗೂ ಮೈಸೂರು ವಿಶ್ವವಿದ್ಯಾನಿಲಯದ ನೂತನ ಕುಲಪತಿಗಳಾಗಿ ನೇಮಕಗೊಂಡಿರುವ ಪ್ರೊ. ಜಿ. ಹೇಮಂತಕುಮಾರ್, ಗಣಕ ವಿಜ್ಞಾನ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇವರನ್ನು ಸಭೆಗೆ ಹೃತ್ಪೂರ್ವಕವಾಗಿ ಸ್ವಾಗತಿಸಿದರು.

ಮಾನ್ಯ ಕುಲಪತಿಗಳು ಮಾತನಾಡಿ ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿಗಳಾಗಿ ನೇಮಕ ಮಾಡಿದ ಘನತೆವೆತ್ತ ರಾಜ್ಯಪಾಲರು, ಘನ ಸರ್ಕಾರಕ್ಕೆ ಹಾಗೂ ಮಾನ್ಯ ಉನ್ನತ ಶಿಕ್ಷಣ ಸಚಿವರಿಗೆ ವಂದಿಸಿ, ಶಿಕ್ಷಣ ಮಂಡಳಿ ಎರಡನೇ ಸಾಮಾನ್ಯ ಸಭೆಗೆ ಆಗಮಿಸಿರುವ ಎಲ್ಲಾ ಸದಸ್ಯರನ್ನು ಹಾಗೂ ಪತ್ರಿಕಾ ಮಾಧ್ಯಮದವರನ್ನು ಸಭೆಗೆ ಸ್ವಾಗತಿಸಿದರು.

ಶಿಕ್ಷಣ ಮಂಡಳಿಗೆ ಹೊಸದಾಗಿ ನಾಮನಿರ್ದೇಶನಗೊಂಡಿರುವ ಈ ಕೆಳಕಂಡ ಸದಸ್ಯರುಗಳನ್ನು ಸಭೆಗೆ ಪರಿಚಯಿಸಿ, ಅವರನ್ನೂ ಸಹ ಸಭೆಗೆ ಸ್ವಾಗತಿಸಲಾಯಿತು.

1. ಶ್ರೀ ಕೆ.ಟಿ. ಶ್ರೀಕಂಠೇಗೌಡ, ಮಾನ್ಯ ವಿಧಾನ ಪರಿಷತ್ ಸದಸ್ಯರು ಬೆಂಗಳೂರು.
2. ಪ್ರೊ. ಸದಾನಂದ ಎಂ. ಯಮಕನಮರಡಿ, ಡೀನರು, ವಿಜ್ಞಾನ ಮತ್ತು ತಂತ್ರಜ್ಞಾನ ನಿಕಾಯ, ಪ್ರಾಣಿಶಾಸ್ತ್ರ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು.
3. ಪ್ರೊ. ಶಿವಬಸವಯ್ಯ, ಪ್ರಾಣಿಶಾಸ್ತ್ರ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು.
4. ಪ್ರೊ. ಸಿ. ರಾಮಸ್ವಾಮಿ, ಪ್ರಭಾರ ನಿರ್ದೇಶಕರು, ವಿದ್ಯಾರ್ಥಿ ಕ್ಷೇಮಪಾಲನಾ ನಿರ್ದೇಶನಾಲಯ, ಮಾನಸಗಂಗೋತ್ರಿ, ಮೈಸೂರು.
5. ಡಾ. ಪಿ. ಸರಸ್ವತಿ, ಪ್ರಭಾರ ಗ್ರಂಥಪಾಲಕರು, ಮೈಸೂರು ವಿಶ್ವವಿದ್ಯಾನಿಲಯ ಗ್ರಂಥಾಲಯ, ಮಾನಸಗಂಗೋತ್ರಿ, ಮೈಸೂರು.
6. ಶ್ರೀ ಜಿ.ಯು. ಚನ್ನಬಸಪ್ಪ, ಪ್ರಾಂಶುಪಾಲರು, ಹೊಯ್ಸಳೇಶ್ವರ ಪ್ರಥಮ ದರ್ಜೆ ಕಾಲೇಜು, ಅರಸೀಕೆರೆ, ಹಾಸನ.
7. ಶ್ರೀ ಕೆ. ಶಾಂತಕುಮಾರ್, ಪ್ರಾಂಶುಪಾಲರು, ವಿಜಯ ಪ್ರಥಮ ದರ್ಜೆ ಕಾಲೇಜು, ಪಾಂಡವಪುರ.

ಇದುವರೆವಿಗೂ ಮೈಸೂರು ವಿಶ್ವವಿದ್ಯಾನಿಲಯದ ಪ್ರಭಾರ ಕುಲಪತಿಗಳಾಗಿ ಸೇವೆ ಸಲ್ಲಿಸಿ ನಿರ್ಗಮಿಸಿರುವ ಈ ಕೆಳಕಂಡವರುಗಳ ಸೇವೆಯನ್ನು ಸ್ಮರಿಸಿ ದಾಖಲಿಸಲಾಯಿತು.

1. ಪ್ರೊ. ಟಿ.ಕೆ. ಉಮೇಶ್, ಡೀನರು, ವಿಜ್ಞಾನ ಮತ್ತು ತಂತ್ರಜ್ಞಾನ ನಿಕಾಯು. ಭೌತಶಾಸ್ತ್ರ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು.
2. ಪ್ರೊ. ಆಯಿಷಾ ಎಂ. ಷರೀಫ್, ಡೀನರು, ವಾಣಿಜ್ಯ ನಿಕಾಯ, ವ್ಯವಹಾರ ಆಡಳಿತ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು.

ಹಾಗೂ ಇದುವರೆವಿಗೂ ಶಿಕ್ಷಣ ಮಂಡಳಿಯ ಸದಸ್ಯರಾಗಿ ಸೇವೆ ಸಲ್ಲಿಸಿ ನಿರ್ಗಮಿಸಿರುವ ಈ ಕೆಳಕಂಡ ಸದಸ್ಯರುಗಳ ಸೇವೆಯನ್ನು ಸ್ಮರಿಸಿ ದಾಖಲಿಸಲಾಯಿತು.

1. ಪ್ರೊ. ತುಳಸೀಮಾಲ, ಅರ್ಥಶಾಸ್ತ್ರ ಮತ್ತು ಸಹಕಾರ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು.
2. ಡಾ. ಆರ್.ಟಿ. ರಮೇಶ್ ಗಾಂಧಿ, ಪ್ರಭಾರ ಗ್ರಂಥಪಾಲಕರು, ಮೈಸೂರು ವಿಶ್ವವಿದ್ಯಾನಿಲಯ ಗ್ರಂಥಾಲಯ, ಮಾನಸಗಂಗೋತ್ರಿ, ಮೈಸೂರು.
3. ಡಾ. ಕೆ.ಬಿ. ಪ್ರವೀಣ್, ನಿರ್ದೇಶಕರು, ವಿದ್ಯಾರ್ಥಿ ಕ್ಷೇಮಪಾಲನಾ ನಿರ್ದೇಶನಾಲಯ, ಮಾನಸಗಂಗೋತ್ರಿ, ಮೈಸೂರು.
4. ಶ್ರೀ ಕೆ. ಸೋಮಶೇಖರ್, ಪ್ರಾಂಶುಪಾಲರು, ವಿಜಯ ಶಿಕ್ಷಣ ಕಾಲೇಜು ಪಾಂಡವಪುರ.
5. ಶ್ರೀ ಎಂ.ವಿ. ಪುಷ್ಪಕುಮಾರ್, ಪ್ರಾಂಶುಪಾಲರು, ಬಿಳಿಗಿರಿ ಪ್ರಥಮ ದರ್ಜೆ ಕಾಲೇಜು, ಯಳಂದೂರು.

ನಂತರ ಕಾರ್ಯಸೂಚಿಯನ್ನು ಕೈಗೆತ್ತಿಕೊಳ್ಳಲಾಯಿತ್ತು.

| ವಿಷಯ ಸಂಖ್ಯೆ: | **ವಿಷಯ ಸಂಕ್ಷಿಪ್ತವಾಗಿ** |
|---|---|
| **I.1** | ದಿನಾಂಕ 15-09-2018ರಂದು ನಡೆದ ಶಿಕ್ಷಣ ಮಂಡಳಿಯ ಮೊದಲನೇ ಸಾಮಾನ್ಯ ಸಭೆಯ ನಡಾವಳಿಗಳನ್ನು ದೃಢೀಕರಿಸುವ ಬಗ್ಗೆ. |
| **ತೀರ್ಮಾನ** | ದಿನಾಂಕ 15-09-2018ರಂದು ನಡೆದ ಶಿಕ್ಷಣ ಮಂಡಳಿ ಮೊದಲನೇ ಸಾಮಾನ್ಯ ಸಭೆಯ ನಡಾವಳಿಗಳನ್ನು ದೃಢೀಕರಿಸಲಾಯಿತು. |
| **II.1** | 2018-19ನೇ ಶೈಕ್ಷಣಿಕ ಸಾಲಿಗೆ ಶಿಕ್ಷಣ ಕಾಲೇಜುಗಳಿಗೆ ಪುನರ್ ಪರಿಶೀಲನಾ ಸಮಿತಿ ಶಿಫಾರಸ್ಸಿನ ಆಧಾರ ಒಂದು ಸೆಕ್ಷನ್ ಬದಲಿಗೆ ಎರಡು ಸೆಕ್ಷನ್ 100 ಸಂಖ್ಯೆ ವಿದ್ಯಾರ್ಥಿಗಳ ಪ್ರವೇಶಾತಿಗೆ ವಿಸ್ತಾರಣಾ ಸಂಯೋಜನಾ ಆದೇಶ ಹೊರಡಿಸಿರುವುದರ ಕುರಿತು ಅನುಸಮರ್ಥನೆ ಬಗ್ಗೆ. |
| | ಮಾನ್ಯ ವಿಧಾನ ಪರಿಷತ್ ಸದಸ್ಯರಾದ ಶ್ರೀ ಅಪ್ಪಾಜಿಗೌಡ ಅವರು ಮಾತನಾಡಿ ಒಂದು ಸೆಕ್ಷನ್ ಬದಲಿಗೆ ಎರಡು ಸೆಕ್ಷನ್ 100 ಸಂಖ್ಯೆ ವಿದ್ಯಾರ್ಥಿಗಳ ಪ್ರವೇಶಾತಿ ವಿಸ್ತಾರಣೆಗೆ ಆದೇಶ ಹೊರಡಿಸಿರುವುದಕ್ಕೆ ವಿವರಣೆ ಕೇಳಿದರು.<br><br>ಕಾಲೇಜು ಅಭಿವೃದ್ಧಿ ಮಂಡಳಿಯ ನಿರ್ದೇಶಕರಾದ ಡಾ. ಎಸ್. ಶ್ರೀಕಂಠಸ್ವಾಮಿ ಅವರು ಮಾತನಾಡಿ ಶ್ರೀರಂಗ ಬಿ.ಇಡಿ, ಕಾಲೇಜು, ಹಾಸನ ಹಾಗೂ ಭಗವಾನ್ ಬುದ್ಧ ಬಿ.ಇಡಿ ಕಾಲೇಜಿನವರಿಗೆ NCTEಯು 02 Unitಗೆ (ಹೆಚ್ಚುವರಿಯಾಗಿ) ಅನುಮೋದನೆ ನೀಡಿರುವುದರ ಹಿನ್ನೆಲೆಯಲ್ಲಿ ಅನುಮತಿ ನೀಡಲಾಗಿದೆ. ಈ ಹಿಂದೆ ಮಾನ್ಯ ಕುಲಪತಿಗಳು ಒಂದು ಸಮಿತಿಯನ್ನು ರಚಿಸಿ ಈ ಕಾಲೇಜುಗಳಿಂದ ವರದಿಯನ್ನು ಪಡೆದು ಕಂಡಿಷನ್ಸ್ ಪೂರೈಸಿರುವುದರಿಂದ ಒಂದು ಸೆಕ್ಷನ್‌ಗೆ ಬದಲಿಗೆ ಎರಡು ಸೆಕ್ಷನ್‌ಗೆ 100 ವಿದ್ಯಾರ್ಥಿಗಳ ಪ್ರವೇಶಾತಿಗೆ ಅನುಮತಿ ನೀಡಿರುವುದಕ್ಕೆ ಸಿಂಡಿಕೇಟ್ ಸಭೆಯು ಅನುಮೋದನೆ ಮೇರೆಗೆ ಶಿಕ್ಷಣ ಮಂಡಳಿಯ ವಿಷಯವನ್ನು ಅನುಸಮರ್ಥನೆಗಾಗಿ ಮಂಡಿಸಲಾಗಿದೆ ಎಂದು ತಿಳಿಸಿದರು. |

| | |
|---|---|
| | ವಿದ್ಯಾರ್ಥಿ ಕ್ಷೇಮಪಾಲನಾ ನಿರ್ದೇಶಕರಾದ ಪ್ರೊ. ಸಿ. ರಾಮಸ್ವಾಮಿ ಅವರು ಮಾತನಾಡಿ ಭಗವಾನ್ ಬುದ್ಧ ಬಿ.ಇಡಿ ಕಾಲೇಜಿನಲ್ಲಿ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಸರ್ಕಾರದಿಂದ ಬರುವ ವಿದ್ಯಾರ್ಥಿ ವೇತನದ ಜೊತೆಗೆ ಶುಲ್ಕವನ್ನು ಪಡೆಯುತ್ತಿದ್ದಾರೆ ಎಂದು ಕೆಲವು ವಿದ್ಯಾರ್ಥಿಗಳು ದೂರು ನೀಡಿರುತ್ತಾರೆ ಇದರ ಬಗ್ಗೆ ಕ್ರಮ ತೆಗೆದುಕೊಳ್ಳಬೇಕೆಂದು ತಿಳಿಸಿದರು.<br><br>ಡಾ. ಎಸ್. ಶ್ರೀಕಂಠಸ್ವಾಮಿಯವರು ಮಾತನಾಡಿ ಇಂತಹ ದೂರು ಈ ವರ್ಷದಲ್ಲಿ ಮಾತ್ರ ಬಂದಿರುತ್ತದೆ. ಈಗಾಗಲೇ ಸಂಬಂಧಿಸಿದ ಕಾಲೇಜಿಗೆ ನೋಟಿಸ್ ಜಾರಿಮಾಡಲಾಗಿದೆ, ಈ ಬಗ್ಗೆ ಒಂದು ಸಮಿತಿಯನ್ನು ಸಹ ರಚಿಸಲಾಗಿದೆ, ಸಮಿತಿ ವರದಿಯ ಪ್ರಕಾರ ಕೆಲವು ವಿದ್ಯಾರ್ಥಿಗಳು ಸರಿಯಾಗಿ ತರಗತಿಗಳಿಗೆ, ಪ್ರಾಕ್ಟಿಕಲ್ ಕ್ಲಾಸ್‌ಗೂ ಸಹ ಹಾಜರಾಗದೆ ಹಣಕೊಟ್ಟು ಪರೀಕ್ಷೆಗೆ ಹಾಜರಾಗಿರುತ್ತಾರೆ ಇಂತಹ ಕಾಲೇಜುಗಳನ್ನು ಗುರುತಿಸಿ ಕಟ್ಟುನಿಟ್ಟಿನ ಕ್ರಮವಹಿಸಲಾಗುವುದೆಂದು ತಿಳಿಸಿದರು. |
| ತೀರ್ಮಾನ | 2018–19ನೇ ಶೈಕ್ಷಣಿಕ ಸಾಲಿಗೆ ಶಿಕ್ಷಣ ಕಾಲೇಜುಗಳಿಗೆ ಪುನರ್ ಪರಿಶೀಲನಾ ಸಮಿತಿ ಶಿಫಾರಸ್ಸಿನ ಆಧಾರ ಒಂದು ಸೆಕ್ಷನ್ ಬದಲಿಗೆ ಎರಡು ಸೆಕ್ಷನ್ (100 ಸಂಖ್ಯೆ) ವಿದ್ಯಾರ್ಥಿಗಳ ಪ್ರವೇಶಾತಿಗೆ ವಿಸ್ತಾರಣಾ ಸಂಯೋಜನಾ ಆದೇಶ ಹೊರಡಿಸಿರುವುದನ್ನು ಅನುಸಮರ್ಥಿಸಲಾಯಿತು. |
| **II.2** | 2018–19ನೇ ಶೈಕ್ಷಣಿಕ ಸಾಲಿನ ಮೈಸೂರಿನ ಸರಸ್ವತಿಪುರಂನಲ್ಲಿರುವ ಜೆ. ಎಸ್. ಎಸ್. ಮಹಿಳಾ ಸ್ವಾಯತ್ತತಾ ಕಾಲೇಜಿಗೆ ಪರಾಮರ್ಶನಾ ಸಮಿತಿಯು ಭೇಟಿ ನೀಡಿ ಪರಿಶೀಲಿಸಿ ಸಲ್ಲಿಸಿದ ವರದಿಯನ್ನು ವಿದ್ಯಾವಿಷಯಕ ಪರಿಷತ್ ಸಭೆಯ – ಅನುಸಮರ್ಥನೆ ಬಗ್ಗೆ. |
| ತೀರ್ಮಾನ | ಜೆ. ಎಸ್. ಎಸ್. ಮಹಿಳಾ ಸ್ವಾಯತ್ತತಾ ಕಾಲೇಜಿಗೆ ಪರಾಮರ್ಶನಾ ಸಮಿತಿಯು ಭೇಟಿ ನೀಡಿ ಪರಿಶೀಲಿಸಿ ಸಲ್ಲಿಸಿದ ವರದಿಯನ್ನು ಅನುಸಮರ್ಥಸಲಾಯಿತು. |
| **II.3** | 2018–19ನೇ ಶೈಕ್ಷಣಿಕ ಸಾಲಿನ ಮಂಡ್ಯದ ಮಹಿಳಾ ಸರ್ಕಾರಿ ಸ್ವಾಯತ್ತತಾ ಕಾಲೇಜಿಗೆ ಪರಾಮರ್ಶನಾ ಸಮಿತಿಯು ಭೇಟಿ ನೀಡಿ ಪರಿಶೀಲಿಸಿ ಸಲ್ಲಿಸಿದ ವರದಿಯನ್ನು ವಿದ್ಯಾವಿಷಯಕ ಪರಿಷತ್ ಸಭೆಯ – ಅನುಸಮರ್ಥನೆ ಬಗ್ಗೆ. |
| ತೀರ್ಮಾನ | ಮಂಡ್ಯದ ಮಹಿಳಾ ಸರ್ಕಾರಿ ಸ್ವಾಯತ್ತತಾ ಕಾಲೇಜಿಗೆ ಪರಾಮರ್ಶನಾ ಸಮಿತಿಯು ಭೇಟಿ ನೀಡಿ ಪರಿಶೀಲಿಸಿ ಸಲ್ಲಿಸಿದ ವರದಿಯನ್ನು ಅನುಸಮರ್ಥಸಿಲಾಯಿತು. |
| **II.4** | 2018–19ನೇ ಶೈಕ್ಷಣಿಕ ಸಾಲಿನ ಮಂಡ್ಯದ ಸರ್ಕಾರಿ ಮಹಾವಿದ್ಯಾಲಯ ಸ್ವಾಯತ್ತತಾ ಕಾಲೇಜಿಗೆ ಪರಾಮರ್ಶನಾ ಸಮಿತಿಯು ಭೇಟಿ ನೀಡಿ ಪರಿಶೀಲಿಸಿದ ವರದಿಯನ್ನು ವಿದ್ಯಾವಿಷಯಕ ಪರಿಷತ್ ಸಭೆಯ – ಅನುಸವರ್ಥನೆ ಬಗ್ಗೆ. |
| ತೀರ್ಮಾನ | ಮಂಡ್ಯದ ಸರ್ಕಾರಿ ಮಹಾವಿದ್ಯಾಲಯ ಸ್ವಾಯತ್ತತಾ ಕಾಲೇಜಿಗೆ ಪರಾಮರ್ಶನಾ ಸಮಿತಿಯು ಭೇಟಿ ನೀಡಿ ಪರಿಶೀಲಿಸಿದ ವರದಿಯನ್ನು ಅನುಸಮರ್ಥಿಸಲಾಯಿತು. |
| **II.5** | 2018–19ನೇ ಶೈಕ್ಷಣಿಕ ಸಾಲಿನ ಹಾಸನದ ಸರ್ಕಾರಿ ವಿಜ್ಞಾನ ಸ್ವಾಯತ್ತತಾ ಕಾಲೇಜಿಗೆ ಪರಾಮರ್ಶನಾ ಸಮಿತಿಯು ಭೇಟಿ ನೀಡಿ ಪರಿಶೀಲಿಸಿ ವರದಿಯನ್ನು ವಿದ್ಯಾವಿಷಯಕ ಸಭೆಯ – ಅನುಸಮರ್ಥನೆ ಬಗ್ಗೆ. |
| ತೀರ್ಮಾನ | ಹಾಸನದ ಸರ್ಕಾರಿ ವಿಜ್ಞಾನ ಸ್ವಾಯತ್ತತಾ ಕಾಲೇಜಿಗೆ ಪರಾಮರ್ಶನಾ ಸಮಿತಿಯು ಭೇಟಿ ನೀಡಿ ಪರಿಶೀಲಿಸಿದ ವರದಿಯನ್ನು ಅನುಸಮರ್ಥಿಸಲಾಯಿತು. |
| **II.6** | 2018–19ನೇ ಶೈಕ್ಷಣಿಕ ಸಾಲಿನ ಮೈಸೂರಿನ ಬಿ.ಎನ್. ರಸ್ತೆಯಲ್ಲಿರುವ ಜೆ. ಎಸ್. ಎಸ್. ಕಲಾ, ವಿಜ್ಞಾನ ಮತ್ತು ವಾಣಿಜ್ಯ ಸ್ವಾಯತ್ತತಾ ಕಾಲೇಜಿಗೆ ಪರಾಮರ್ಶನಾ ಸಮಿತಿಯು ಭೇಟಿ ನೀಡಿ ಪರಿಶೀಲಿಸಿ ಸಲ್ಲಿಸಿದ ವರದಿಯನ್ನು ವಿದ್ಯಾವಿಷಯಕ ಸಭೆಯ – ಅನುಸಮರ್ಥನೆ ಬಗ್ಗೆ. |

| | |
|---|---|
| ತೀರ್ಮಾನ | ಮೈಸೂರಿನ ಬಿ.ಎನ್. ರಸ್ತೆಯಲ್ಲಿರುವ ಜೆ. ಎಸ್. ಎಸ್. ಕಲಾ, ವಿಜ್ಞಾನ ಮತ್ತು ವಾಣಿಜ್ಯ ಸ್ವಾಯತ್ತತಾ ಕಾಲೇಜಿಗೆ ಪರಾಮರ್ಶನಾ ಸಮಿತಿಯು ಭೇಟಿ ನೀಡಿ ಪರಿಶೀಲಿಸಿ ಸಲ್ಲಿಸಿದ ವರದಿಯನ್ನು ಅನುಸಮರ್ಥಿಸಲಾಯಿತು. |
| **II.7** | 2018–19ನೇ ಶೈಕ್ಷಣಿಕ ಸಾಲಿನ ಮೈಸೂರಿನ ಬನ್ನಿಮಂಟಪದಲ್ಲಿರುವ ಸೆಂಟ್ ಫಿಲೋಮಿನಾಸ್ ಸ್ವಾಯತ್ತತಾ ಕಾಲೇಜಿಗೆ ಪರಾಮರ್ಶನಾ ಸಮಿತಿಯು ಭೇಟಿ ನೀಡಿ ಪರಿಶೀಲಿಸಿ ಸಲ್ಲಿಸಿದ ವರದಿಯನ್ನು ವಿದ್ಯಾವಿಷಯಕ ಸಭೆಯ – ಅನುಸಮರ್ಥನೆ ಬಗ್ಗೆ. |
| ತೀರ್ಮಾನ | ಮೈಸೂರಿನ ಬನ್ನಿಮಂಟಪದಲ್ಲಿರುವ ಸೆಂಟ್ ಫಿಲೋಮಿನಾಸ್ ಸ್ವಾಯತ್ತತಾ ಕಾಲೇಜಿಗೆ ಪರಾಮರ್ಶನಾ ಸಮಿತಿಯು ಭೇಟಿ ನೀಡಿ ಪರಿಶೀಲಿಸಿ ಸಲ್ಲಿಸಿದ ವರದಿಯನ್ನು ಅನುಸಮರ್ಥಿಸಲಾಯಿತು. |
| **II.8** | 2018–19ನೇ ಶೈಕ್ಷಣಿಕ ಸಾಲಿನ ಹಾಸನದ ಸರ್ಕಾರಿ ಕಲಾ, ವಾಣಿಜ್ಯ ಮತ್ತು ಸ್ನಾತಕೋತ್ತರ ಕಾಲೇಜಿಗೆ ಪರಾಮರ್ಶನಾ ಸಮಿತಿಯು ಭೇಟಿ ನೀಡಿ ಪರಿಶೀಲಿಸಿ ಸಲ್ಲಿಸಿದ ವರದಿಯನ್ನು ವಿದ್ಯಾವಿಷಯಕ ಪರಿಷತ್ ಸಭೆಯ – ಅನುಸಮರ್ಥನೆ ಬಗ್ಗೆ. |
| ತೀರ್ಮಾನ | ಹಾಸನದ ಸರ್ಕಾರಿ ಕಲಾ, ವಾಣಿಜ್ಯ ಮತ್ತು ಸ್ನಾತಕೋತ್ತರ ಕಾಲೇಜಿಗೆ ಪರಾಮರ್ಶನಾ ಸಮಿತಿಯು ಭೇಟಿ ನೀಡಿ ಪರಿಶೀಲಿಸಿ ಸಲ್ಲಿಸಿದ ವರದಿಯನ್ನು ಅನುಸಮರ್ಥಿಸಲಾಯಿತು. |
| **II.9** | ಮೈಸೂರಿನ ಸೆಂಟ್ ಜೋಸೆಫ್ ಸಂಜೆ ಕಾಲೇಜನ್ನು ಮುಚ್ಚುವ ಬಗ್ಗೆ. |
| ತೀರ್ಮಾನ | ಮೈಸೂರಿನ ಸೆಂಟ್ ಜೋಸೆಫ್ ಸಂಜೆ ಕಾಲೇಜನ್ನು ಮುಚ್ಚವ ಸಂಬಂಧ ಸಂಬಂಧಪಟ್ಟ ಕಾಲೇಜಿನವರು ವಿಶ್ವವಿದ್ಯಾನಿಲಯದ ಎಲ್ಲಾ ನಿಯಾಮಗಳನ್ನು ಪಾಲಿಸಿರುವುದರಿಂದ ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ 2000 ಪ್ರಕರಣ 65(2)(3)ರನ್ವಯ ಸದರಿ ಕಾಲೇಜಿನ ಸಂಯೋಜನೆಯನ್ನು ಹಿಂತೆಗುದುಕೊಳ್ಳಲು ಸಭೆಯು ಒಪ್ಪಿತು. |
| **II.10** | 2017–18ನೇ ಸಾಲಿನ ಮೈಸೂರು ವಿಶ್ವವಿದ್ಯಾನಿಲಯದ ವಾರ್ಷಿಕ ಲೆಕ್ಕ ಪತ್ರಗಳು. |
| ತೀರ್ಮಾನ | 2017–18ನೇ ಸಾಲಿನ ವಾರ್ಷಿಕ ಲೆಕ್ಕ ಪತ್ರಗಳನ್ನು ಅನುಮೋದಿಸಲಾಯಿತು. |
| **II.11** | ಮೈಸೂರು ವಿಶ್ವವಿದ್ಯಾನಿಲಯದ ಮಾನ್ಯತೆ ಪಡೆದು ನಡೆಸಲಾಗುತ್ತಿರುವ ಸ್ಪೆಷಲೈಸ್ಡ್ ಪ್ರೋಗ್ರಾಂ ಹಾಗೂ ಸಂಶೋಧನಾ ಕೇಂದ್ರಗಳ ಮಾನ್ಯತೆಯ ಬಗ್ಗೆ ತಾಂತ್ರಿಕ ವಿಷಯಗಳಲ್ಲಿನ ಸ್ಪಷ್ಟತೆಗಾಗಿ ರಚಿತವಾಗಿದ್ದ ಉಪ ಸಮಿತಿ ನಡಾವಳಿಗೆ ಅನುಮೋದನೆ ಬಗ್ಗೆ. |
| ತೀರ್ಮಾನ | ಉಪ ಸಮಿತಿಯನ್ನು ಪುನರ್ ರಚಿಸಲು ಸಿಂಡಿಕೇಟ್ ಸಭೆಯಲ್ಲಿ ನಿರ್ಧರಿಸಿರುವುದರಿಂದ ಪುನರ್ ರಚಿತ ಸಮಿತಿಯು ಸಭೆ ನಡೆದು ವರದಿ ಬಂದ ನಂತರ ಶಿಕ್ಷಣ ಮಂಡಳಿಗೆ ಮಂಡಿಸಲು ನಿರ್ಧಾರಿಸಲಾಯಿತು. |
| **II.12** | ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಶ್ರೀ ಬಸವೇಶ್ವರ ಸಾಮಾಜಿಕ ಪರಿಷ್ಕರಣ ಸಂಶೋಧನಾ ಮತ್ತು ವಿಸ್ತರಣಾ ಕೇಂದ್ರ ಸ್ಥಾಪಿಸುವ ಬಗ್ಗೆ ಸಿದ್ದಪಡಿಸಿರುವ ಪರಿಷ್ಕೃತ ಪರಿನಿಯಮಾವಳಿಯ ಅನುಮೋದನೆಗಾಗಿ. |
| ತೀರ್ಮಾನ | ಶ್ರೀ ಬಸವೇಶ್ವರ ಸಾಮಾಜಿಕ ಪರಿಷ್ಕರಣ ಸಂಶೋಧನಾ ಮತ್ತು ವಿಸ್ತರಣಾ ಕೇಂದ್ರ ಸ್ಥಾಪಿಸಲು ಸಿದ್ದಪಡಿಸಿರುವ ಪರಿಷ್ಕೃತ ಪರಿನಿಯಮಾವಳಿಯನ್ನು ಅನುಮೋದಿಸಲಾಯಿತು. |
| **II.13** | ಪರಿಷ್ಕೃತ ಬಿ.ಎ (ಫೈನ್ ಆರ್ಟ್ಸ್) ಕೋರ್ಸಿನ Question Paper pattern - ನ್ನು ಬದಲಾವಣೆ ಮಾಡಿರುವ ವಿಷಯವನ್ನು ಅನುಸಮರ್ಥನೆಗಾಗಿ. |
| ತೀರ್ಮಾನ | ಪರಿಷ್ಕೃತ ಬಿ.ಎ (ಫೈನ್ ಆರ್ಟ್ಸ್) ಕೋರ್ಸಿನ Question Paper pattern – ನ್ನು ಬದಲಾವಣೆ ಮಾಡಿರುವ ವಿಷಯವನ್ನು ಅನುಸಮರ್ಥಿಸಲಾಯಿತು. |
| **II.14** | ಮೈಸೂರು ವಿಶ್ವವಿದ್ಯಾನಿಲಯದಲ್ಲಿ 2018–19ನೇ ಸಾಲಿನಿಂದ ದೂರ ಶಿಕ್ಷಣ ಕೋರ್ಸುಗಳ ಸಂಬಂಧ ರೂ 1,24,50,000/–ಗಳನ್ನು ಮರುಹೊಂದಾಣಿಕೆ ಮಾಡಿಕೊಂಡು ಶೀರ್ಷಿಕೆಯನ್ನು ನಿಗಧಿಗೊಳಿಸುವ ಬಗ್ಗೆ. |
| ತೀರ್ಮಾನ | ಮೈಸೂರು ವಿಶ್ವವಿದ್ಯಾನಿಲಯದಲ್ಲಿ 2018–19ನೇ ಸಾಲಿನಿಂದ ದೂರ ಶಿಕ್ಷಣ ಕೋರ್ಸುಗಳ ಸಂಬಂಧ ರೂ 1,24,50,000/–ಗಳನ್ನು ಮರುಹೊಂದಾಣಿಕೆ ಮಾಡಿಕೊಂಡು ಶೀರ್ಷಿಕೆ, ನಿಗಧಿಗೊಳಿಸಿರುವುದನ್ನು ಒಪ್ಪಲಾಯಿತು. |

| | |
|---|---|
| **II.15** | 2014–15ನೇ ಸಾಲಿನ ಮೈಸೂರು ವಿಶ್ವವಿದ್ಯಾನಿಲಯದ ವಾರ್ಷಿಕ ಲೆಕ್ಕ ಪರಿಶೋಧನಾ ವರದಿಯ ಆಕ್ಷೇಪಣೆಗಳಿಗೆ ಉತ್ತರವನ್ನು ಸಿದ್ದಪಡಿಸಿರುವ ಬಗ್ಗೆ. |
| **ತೀರ್ಮಾನ** | ಅನುಮೋದಿಸಲಾಯಿತು. |
| **II.16** | ಪಿ.ಹೆಚ್.ಡಿ. ಪ್ರವೇಶ ಪರೀಕ್ಷೆಯಲ್ಲಿ ಉತ್ತೀರ್ಣರಾದ ಅಭ್ಯರ್ಥಿಗಳು ಪಿ.ಹೆಚ್.ಡಿ. ನೋಂದಣಿ ಪಡೆಯಲು ಇರುವ ಕಾಲ ಮಿತಿಯನ್ನು ಒಂದು ವರ್ಷದಿಂದ ಎರಡು ವರ್ಷಕ್ಕೆ ವಿಸ್ತರಿಸುವ ಬಗ್ಗೆ. |
| **ತೀರ್ಮಾನ** | ಪಿ.ಹೆಚ್.ಡಿ. ಪ್ರವೇಶ ಪರೀಕ್ಷೆಯಲ್ಲಿ ಉತ್ತೀರ್ಣರಾದ ಅಭ್ಯರ್ಥಿಗಳ ಪಿ.ಹೆಚ್.ಡಿ ನೋಂದಣಿ ಪಡೆಯಲು ಇರುವ ಕಾಲ ಮಿತಿಯನ್ನು ಒಂದು ವರ್ಷದಿಂದ ಎರಡು ವರ್ಷಕ್ಕೆ ವಿಸ್ತರಿಸಲು ಒಪ್ಪಲಾಯಿತು. |
| **II.17** | ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಡಾ. ಯು.ಆರ್. ಅನಂತಮೂರ್ತಿ ಅವರ ಹೆಸರಿನಲ್ಲಿ ಅಧ್ಯಯನ ಪೀಠ ಸ್ಥಾಪನೆ ಸಂಬಂಧ ಸಿದ್ಧಪಡಿಸಿರುವ ಕರಡು ಅಧಿನಿಯಮ ಅನುಮೋದಿಸುವ ಬಗ್ಗೆ. |
| **ತೀರ್ಮಾನ** | ಡಾ. ಯು.ಆರ್. ಅನಂತಮೂರ್ತಿ ಅವರ ಹೆಸರಿನಲ್ಲಿ ಅಧ್ಯಯನ ಪೀಠ ಸ್ಥಾಪನೆ ಮಾಡುವ ಸಂಬಂಧದ ಸಿದ್ದಪಡಿಸಿರುವ ಕರಡು ಅಧಿನಿಯಮನ್ನು ಅನುಮೋದಿಸಲಾಯಿತು. |
| **II.18** | ಪಿರಿಯಾಪಟ್ಟಣ ಯಜಮಾನ ಪ್ರಥಮ ದರ್ಜೆ ಕಾಲೇಜನ್ನು ಮುಚ್ಚುವ ಬಗ್ಗೆ. |
| **ತೀರ್ಮಾನ** | ಪಿರಿಯಾಪಟ್ಟಣ ಯಜಮಾನ ಪ್ರಥಮ ದರ್ಜೆ ಕಾಲೇಜನ್ನು ಮುಚ್ಚಲು ಮುಚ್ಚುವ ಸಂಬಂಧ ಸಂಬಂಧಪಟ್ಟ ಕಾಲೇಜಿನವರು ವಿಶ್ವವಿದ್ಯಾನಿಲಯದ ಎಲ್ಲಾ ನಿಯಾಮಗಳನ್ನು ಪಾಲಿಸಿರುವುದರಿಂದ ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ 2000 ಪ್ರಕರಣ 65(2)(3)ರನ್ವಯ ಸದರಿ ಕಾಲೇಜಿನ ಸಂಯೋಜನೆಯನ್ನು ಹಿಂತೆಗುದುಕೊಳ್ಳಲು ಸಭೆಯು ಒಪ್ಪಿತು. |
| **II.19** | ಹಾಸನದ ಸಂತ ಜೋಸೆಫರ ಪ್ರಥಮ ದರ್ಜೆ ಕಾಲೇಜಿನ ಹೆಸರನ್ನು ಸಂತ ಜೋಸೆಫರ ಕಾಲೇಜು ಎಂದು ಬದಲಾವಣೆ ಮಾಡುವ ಬಗ್ಗೆ. |
| **ತೀರ್ಮಾನ** | ಹಾಸನದ ಸಂತ ಜೋಸೆಫರ ಪ್ರಥಮ ದರ್ಜೆ ಕಾಲೇಜಿನ ಹೆಸರನ್ನು ಸಂತ ಜೋಸೆಫರ ಕಾಲೇಜು ಎಂದು ಬದಲಾವಣೆ ಮಾಡುವ ಸಂಬಂಧ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲು ಅನುಮೋದಿಸಲಾಯಿತು. |
| **II.20** | ಪ್ರೊ. ಶೀನ ಶಶಿಕಾಂತ್ ಚಿನ್ನದ ಪದಕ ದತ್ತಿ ಸ್ಥಾಪನೆ ಮಾಡುವ ಬಗ್ಗೆ. |
| **ತೀರ್ಮಾನ** | ಪ್ರೊ. ಶೀನ ಶಶಿಕಾಂತ್ ಚಿನ್ನದ ಪದಕ ದತ್ತಿ ಸ್ಥಾಪನೆಯನ್ನು ಅನುಮೋದಿಸಲಾಯಿತು. |
| **II.21** | ಮೈಸೂರು ವಿಶ್ವವಿದ್ಯಾನಿಲಯದ ಪದವಿ/ಸ್ನಾತಕೋತ್ತರ ಕೋರ್ಸುಗಳಿಗೆ ಪ್ರವೇಶ ಪಡೆಯಲು ಅರ್ಹ ವಿದ್ಯಾರ್ಹತೆ ಬಗ್ಗೆ. |
| **ತೀರ್ಮಾನ** | ಸ್ನಾತಕ ಕೋರ್ಸ್‌ಗಳಿಗೆ COBSEಯಿಂದ ಮಾನ್ಯತೆ/ಸದಸ್ಯತ್ವ ಪಡೆದ ಸಂಸ್ಥೆಗಳು ನೀಡಿದ 10+2 ಅರ್ಹತೆಗೆ ಮಾತ್ರ ಪದವಿ ಕೋರ್ಸಿಗೆ ಪ್ರವೇಶಾತಿ ನೀಡಲು ಮತ್ತು ಯುಜಿಸಿಯಿಂದ ಮಾನ್ಯತೆ ಪಡೆದ ಸಂಸ್ಥೆಗಳು ನೀಡುವ ಪದವಿ ಅರ್ಹತೆಗೆ ಸ್ನಾತಕೋತ್ತರ ಕೋರ್ಸ್‌ಗಳಿಗೆ ಪ್ರವೇಶಾತಿ ನೀಡಲು ಒಪ್ಪಲಾಯಿತು. |
| **II.22** | ಮೈಸೂರು ವಿಶ್ವವಿದ್ಯಾನಿಲಯದ 1995–1998 ರಿಂದ 2013–2015ರವರೆಗಿನ ಮಹಾಲೇಖಪಾಲರ ಲೆಕ್ಕ ಪತ್ರಗಳ ವರದಿಗೆ ಅನುಪಾಲನಾ ವರದಿಯನ್ನು ಶೈಕ್ಷಣಿಕ ಮಂಡಳಿ ಸಭೆಯ ಅನುಮೋದನೆಗಾಗಿ. |
| **ತೀರ್ಮಾನ** | ಮೈಸೂರು ವಿಶ್ವವಿದ್ಯಾನಿಲಯದ 1995–1998 ರಿಂದ 2013–2015ರ ವರೆಗಿನ ಮಹಾಲೇಖಪಾಲರ ಲೆಕ್ಕ ಪತ್ರಗಳ ವರದಿಗೆ ಅನುಪಾಲನಾ ವರದಿಯನ್ನು ಅನುಮೋದಿಸಲಾಯಿತು. |

| II.23 | ಅಧ್ಯಾಪಕರ ಸಿ.ಎ.ಎಸ್. ಪದೋನ್ನತಿಯ ಸಂಬಂಧ API Scores ಬಗ್ಗೆ. |
|---|---|
| | ಪ್ರೊ ಬಿ.ಎಸ್. ವಿಶ್ವನಾಥ್, ಸಂಯೋಜಕರು, ಜೀವ ರಾಸಯಾನಶಾಸ್ತ್ರ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇವರು ಮಾತನಾಡಿ ಅಧ್ಯಾಪಕರ ಸಿ.ಎ.ಎಸ್. ಪದೋನ್ನತಿಯ ಸಂಬಂಧ API Scores ಗೆ ಸಂಬಂಧಿಸಿದ ಮಾಹಿತಿಯನ್ನು Power Point presentation ಮೂಲಕ ಸಭೆಯಲ್ಲಿ ವಿವರಿಸಿ ಈ ಕೆಳಗಿನ Criteria ದಂತೆ ಪದೋನ್ನತಿ ನೀಡಬಹುದಾಗಿದೆ ಎಂದು ತಿಳಿಸಿದರು.<br>UGC regulations 2013:<br>UG and PG Department in the University Campus |

| Scoring Components | Minimum Points required | | | |
|---|---|---|---|---|
| | Assistant Stage 1 to 2 | Assistant Stage 2 to 3 | Assistant to Associate | Assistant to Professor |
| **Cat III.** Research and Academic Contributions | 0.25/Year 1.0 | 0.5/Year 2.5 | 1.0/Year 3 | 2.0/Year 6 |
| **Cat I:** Teacning, learning and evaluation related activities | 75 | 75 | 75 | 75 |
| **Cat II:** Co-curricular, extension and professional development related activities | 15 | 15 | 15 | 15 |
| **Cat I + Cat II** | 100 | 100 | 100 | 100 |
| **Total** | 112 | 120 | 115 | 118 |

| ತೀರ್ಮಾನ | ಅಧ್ಯಾಪಕರ ಸಿ.ಎ.ಎಸ್. ಪದೋನ್ನತಿಯ ಸಂಬಂಧ ಸಭೆಯು ಕೂಲಂಕಷವಾಗಿ ಚರ್ಚಿಸಿ ಮೇಲಿನ Criteria ದಂತೆ ಪದೋನ್ನತಿ ನೀಡಲು ತೀರ್ಮಾನಿಸಲಾಯಿತು. |
|---|---|

ಅಧ್ಯಕ್ಷರ ಅಪ್ಪಣೆ ಮೇರೆಗೆ ಇತರೆ ವಿಷಯಗಳು:

1. ಮಾನ್ಯ ಕುಲಪತಿಗಳು ಮಾತನಾಡುತ್ತಾ ಶಿಕ್ಷಣದ ಗುಣಮಟ್ಟವನ್ನು ಹೆಚ್ಚಿಸಲು ಹಾಗೂ ವಿದ್ಯಾರ್ಥಿಗಳಿಗೆ ಹೊಸ ಹೊಸ ಅನ್ವೇಷಣೆಗಳನ್ನು ಪರಿಚಯಿಸುವ ದೃಷ್ಟಿಯಿಂದ ವಿಶ್ವದ ಪ್ರತಿಷ್ಠಿತ 500 ರ್‍ಯಾಂಕಿಂಗ್‌ನಲ್ಲಿರುವ ವಿಶ್ವವಿದ್ಯಾನಿಲಯಗಳ ಕುಲಪತಿಗಳಿಗೆ ಪತ್ರ ಬರೆದು ಪ್ರಾಧ್ಯಾಪಕರು ಹಾಗೂ ತಜ್ಞರ ಪಟ್ಟಿಯನ್ನು ತರಿಸಿಕೊಳ್ಳಲು ಮತ್ತು ಅಂತಹ ತಜ್ಞರುಗಳನ್ನು ಮೈಸೂರು ವಿಶ್ವವಿದ್ಯಾನಿಲಯಕ್ಕೆ ಆಹ್ವಾನಿಸಿ ಅವರಿಂದ ಭೋದನೆ ಮಾಡಿಸಲಾಗುವುದೆಂದು ಸಭೆಯ ಗಮನಕ್ಕೆ ತಂದರು.

2. ವಿದೇಶಿ ಪ್ರಾಧ್ಯಾಪಕರು/ತಜ್ಞರು ನಮ್ಮ ವಿಶ್ವವಿಶ್ವವಿದ್ಯಾನಿಲಯದಲ್ಲಿ ಒಂದು ತಿಂಗಳುಗಳ ಕಾಲ ತರಗತಿಗಳಲ್ಲಿ ಬೋಧಿಸಲಿದ್ದು ಇದಕ್ಕೆ ತಗಲುವ ವೆಚ್ಚವನ್ನು ಮುಂದಿನ ಹಣಕಾಸು ವರ್ಷದಲ್ಲಿ ಒಂದು ಕೋಟಿ ರೂಪಾಯಿಗಳನ್ನು ಮೀಸಲಿಡಲಾಗುವುದೆಂದು ಸಭೆಗೆ ತಿಳಿಸಿದರು.

3. ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ನಿರ್ದೇಶಕರಾದ ಪ್ರೊ. ಎನ್.ಎಂ. ತಳವಾರ್‌ರವರು ಮಾತನಾಡಿ ವಿದೇಶಿ ಪ್ರಾಧ್ಯಾಪಕರುಗಳನ್ನು ಆಹ್ವಾನಿಸಿ ಬೋಧನೆ ಮಾಡಿಸುವುದರಿಂದ ಕನ್ನಡ ಭಾಷಾ ವಿದ್ಯಾರ್ಥಿಗಳಿಗೆ ಕಲಿಯುವುದು ಕಷ್ಟವಾಗುತ್ತದೆ. ಆದ್ದರಿಂದ ಹೆಸರಾಂತ ಕನ್ನಡ ಪ್ರಾಧ್ಯಾಪಕರುಗಳನ್ನು ಹಾಗೂ ವಿಷಯ ತಜ್ಞರನ್ನು ಆಹ್ವಾನಿಸಿ ಉಪನ್ಯಾಸ ನೀಡಬಹುದೆಂದು ತಿಳಿಸಿದರು. ಇದಕ್ಕೆ ಮಾನ್ಯ ಕುಲಪತಿಗಳು, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯಿಂದ ಈ ವಿಷಯವಾಗಿ ಪ್ರಸ್ತಾವನೆ ಸಲ್ಲಿಸಿದರೆ ಒಪ್ಪಿಗೆ ನೀಡುವುದಾಗಿ ತಿಳಿಸಿದರು.

4. ಮಾನ್ಯ ಕುಲಪತಿಗಳು ಮುಂದುವರೆದು ಮಾತನಾಡಿ 2020ರ ಜನವರಿಯ ವೇಳೆಗೆ ಮೈಸೂರು ವಿಶ್ವವಿದ್ಯಾನಿಲಯಕ್ಕೆ ನ್ಯಾಕ್ ತಂಡವು ಭೇಟಿ ನೀಡಲಿದ್ದು ಈಗಿನಿಂದಲೇ ನ್ಯಾಕ್‌ಗೆ ಸಿದ್ದತೆಗಳನ್ನು ಮಾಡಿಕೊಳ್ಳಬೇಕಾಗಿದೆ ಹಾಗೂ ಈಗಾಗಲೇ ಮೈಸೂರು ವಿಶ್ವವಿದ್ಯಾನಿಲಯವು ಶತಮನೋತ್ಸವನ್ನು ಆಚರಿಸಿಕೊಂಡಿದ್ದು ಅಂತರಾಷ್ಟ್ರೀಯ ಮಟ್ಟದಲ್ಲಿ ಹೆಸರು ಗಳಿಸಿದೆ. ಆದರೆ ದೇಶದ ಮೊದಲ ಹತ್ತು ವಿಶ್ವವಿದ್ಯಾನಿಲಯಗಳ ಪಟ್ಟಿಯಲ್ಲಿ ನಮ್ಮ ವಿಶ್ವವಿದ್ಯಾನಿಲಯದ ಹೆಸರಿಲ್ಲ, ಗ್ರೇಡ್ ವಿಷಯದಲ್ಲಿ 26 ವಿಶ್ವವಿದ್ಯಾನಿಲಯಗಳ ಪಟ್ಟಿಯಲ್ಲಿ ಮೈಸೂರು ವಿಶ್ವವಿದ್ಯಾನಿಲಯವು 3.47 ಅಂಕಗಳಿದ್ದು ಗ್ರೇಡ್ 2ರಲ್ಲಿದೆ, ಗ್ರೇಡ್ ಒಂದಕ್ಕೆ ಸಮೀಪದಲ್ಲಿರುವುದರಿಂದ ವಿಶ್ವವಿದ್ಯಾನಿಲಯವನ್ನು ಮೊದಲನೇ ಸ್ಥಾನಕ್ಕೆ ತರಲು ಎಲ್ಲಾ ಪ್ರಾಧ್ಯಾಪಕರು ನಿಕಾಯಗಳ ಡೀನರು, ಶಿಕ್ಷಣ ಮಂಡಳಿ ಸದಸ್ಯರುಗಳು ಸಹಕರಿಸಲು ಕೋರಿದರು.

5. ಹಾಲಿ ಇರುವ ಅಧ್ಯಯನ ವಿಭಾಗಗಳು ಮತ್ತು ಅವುಗಳಿಗೆ ಸಂಬಂಧಿಸಿದ (Related) ವಿಭಾಗಗಳನ್ನು ಒಂದೊಂದು Schoolನಡಿ ತರುವ ಸಂಬಂಧ Schools in University ಗಳನ್ನು ಸ್ಥಾಪಿಸಲು ಪ್ರೊ. ಆಯಿಷಾ ಎಂ. ಷರೀಫ್‌ರವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ರಚಿಸಲಾಗಿದೆ ಸಮಿತಿ ವರದಿಯನ್ನು ಮುಂದಿನ ಶಿಕ್ಷಣ ಮಂಡಳಿಯಲ್ಲಿ ಮಂಡಿಸಲಾಗುವುದೆಂದು ಸಭೆಯ ಗಮನಕ್ಕೆ ತಂದರು.

6. ಈ ಹಿಂದೆ ಸಂಶೋಧಕರು ಕೇವಲ ಒಂದು ವಿಷಯದ ಬಗ್ಗೆ ಸಂಶೋಧನೆ ನಡೆಸುತ್ತಿದ್ದು ಇದರಿಂದ ಶೈಕ್ಷಣಿಕವಾಗಿ ಜ್ಞಾನ ಹಂಚಿಕೆಯಾಗುತ್ತಿರಲಿಲ್ಲ ಇನ್ನೂಮುಂದೆ ಅಂತರಾಷ್ಟ್ರೀಯ ಬೋಧನೆ ಹಾಗೂ ಅಂತರಾಷ್ಟ್ರೀಯ ಸಂಶೋಧನೆಗಳಿಗೂ ಅವಕಾಶ ನೀಡುವ ದೃಷ್ಟಿಯಿಂದ ರೂ ಒಂದು ಲಕ್ಷಗಳ ವೆಚ್ಚದಲ್ಲಿ ಕಿರು ಸಂಶೋಧನೆ ನಡೆಸಿ ಒಂದು ವರ್ಷದೊಳಗೆ ವಿಶ್ವವಿದ್ಯಾನಿಲಯಕ್ಕೆ ವರದಿ ಸಲ್ಲಿಸಲು ಅವಕಾಶ ಕಲ್ಪಿಸಿಕೊಡಲಾಗಿದೆ ಎಂದು ತಿಳಿಸಿದರು.

ಕೊನೆಯಲ್ಲಿ ಶಿಕ್ಷಣ ಮಂಡಳಿಯ ಎರಡನೇ ಸಭೆಯಲ್ಲಿ ಸಕ್ರಿಯವಾಗಿ ಪಾಲ್ಗೊಂಡು ಅತ್ಯಮೂಲ್ಯ ಸಲಹೆ ಸಹಕಾರಗಳನ್ನು ನೀಡಿ ತೀರ್ಮಾನ ಕೈಗೊಳ್ಳಲು ಸಹಕರಿಸಿದ ಎಲ್ಲಾ ಸದಸ್ಯರುಗಳಿಗೆ ಹಾಗೂ ಪ್ರತಿಕಾ ಮಾಧ್ಯವದವರಿಗೆ ಮಾನ್ಯ ಕುಲಪತಿಗಳು ವಂದನೆ ಸಲ್ಲಿಸಿದ ನಂತರ ಸಭೆಯನ್ನು ಮುಕ್ತಾಯಗೊಳಿಸಿದರು.

ಸಹಿ/-
ಕುಲಸಚಿವರು ಹಾಗೂ ಸದಸ್ಯ ಕಾರ್ಯದರ್ಶಿಗಳು

ಸಹಿ/-
ಕುಲಪತಿಗಳು ಹಾಗೂ ಅಧ್ಯಕ್ಷರು